# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

"ಜ್ಞಾನ ಸಂಗಮ", ಬೆಳಗಾವಿ - 590 018, ಕರ್ನಾಟಕ

ರಾಷ್ಟ್ರೀಯ ಸೇವಾ ಯೋಜನೆ

ದೂರವಾಣಿ ಸಂ : (0831) 2405468

ಕುಲಸಚಿವರು ಫ್ಯಾಕ್ಸ ಸಂ : (0831) 2405467


ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ./19/2020-21/ 221 ದಿನಾಂಕ: 18 AUG 2020

**:ಸುತ್ತೋಲೆ:**

**ವಿಷಯ :** ಆಗಸ್ಟ್ 20ರಂದು ಸದ್ಭಾವನಾ ದಿನಾಚರಣೆಯನ್ನು ಆಚರಿಸುವ ಕುರಿತು.

**ಉಲ್ಲೇಖ:** ಯುಸೇಇ/ರಾಸೇಯೋ/19/2020-21/108 ದಿನಾಂಕ: 18/08/2020

ಈ ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಪ್ರತಿ ವರ್ಷದಂತೆ, ಈ ವರ್ಷವು ಮಾಜಿ ಪ್ರಧಾನಿ ದಿವಂಗತ ರಾಜೀವ ಗಾಂಧಿಯವರ ಜನ್ಮದಿನವಾದ ಆಗಸ್ಟ್ 20ರಂದು ***ಸದ್ಭಾವನ ದಿನಾಚರಣೆಯನ್ನು*** ಆಚರಿಸಲು ಕೋರಲಾಗಿದೆ. ಸದರಿ ದಿನದಂದು ಬೋಧಕ/ಬೋಧಕೇತ ಸಿಬ್ಬಂದಿ ಮತ್ತು ಸ್ವಯಂ ಸೇವಕ/ಸೇವಕಿಯರಲ್ಲಿ ಭಾಷೆ, ಧರ್ಮ ಮತ್ತು ಪ್ರಾದೇಶಿಕತೆ ಕುರಿತಾಗಿ ಸದ್ಭಾವನೆ ಮೂಡುವಂತೆ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಬಹುದಾಗಿದೆ. ಈ ಸುತ್ತೋಲೆದೊಂದಿಗೆ ಲಗತ್ತಿಸಿದ ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆ ವಿಧಿಯನ್ನು ಕಡ್ಡಾಯವಾಗಿ ಬೋದಿಸಲು ಕೋರಲಾಗಿದೆ.

ಕೋವಿಡ್–19 ಪ್ರಯುಕ್ತ ಕಡಿಮೆ ಸಂಖ್ಯೆಯಲ್ಲಿ ಸ್ವಯಂ ಸೇವಕ/ಸೇವಕಿಯರನ್ನು ಸೇರಿಸಿಕೊಂಡು ಅಥವಾ ಆನ್ ಲೈನ್ ಮೂಲಕ ಕಾರ್ಯಕ್ರಮವನ್ನು ನಡೆಸಬಹುದಾಗಿದೆ. ಸದರಿ ಕಾರ್ಯಕ್ರಮದ ಸಂಕ್ಷಿಪ್ತ ವರದಿಯನ್ನು (ಛಾಯಾಚಿತ್ರಗಳೊಂದಿಗೆ) ವಿ.ತಾ.ವಿ.ಯ ರಾ.ಸೇ.ಯೋ. ಕೋಶಕ್ಕೆ (e-mail:nss@vtu.ac.in) ಇ–ಮೇಲ್ ಮೂಲಕ ಸಲ್ಲಿಸಲು ಸೂಚಿಸಲಾಗಿದೆ.

ವಂದನೆಗಳೊಂದಿಗೆ,

Sd/-

ಕುಲಸಚಿವರು

**ಇವರಿಗೆ,**

ಪ್ರಾಂಶುಪಾಲರು/ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಕ್ಷರು,
ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿಗಳು ವಿ.ತಾ.ವಿ. ಅಧಿನಕ್ಕೊಳಪಡುವ
ಸಂಬಂದಪಟ್ಟ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ಪ್ರಾದೇಶಿಕ ನಿರ್ದೇಶಕರು, ವಿತಾವಿಯ ಪ್ರಾದೇಶಿಕ ಕಛೇರಿ ಬೆಳಗಾವಿ, ಕಲಬುರಗಿ, ಮೈಸೂರು ಮತ್ತು ಬೆಂಗಳೂರು.
3. ನಿರ್ದೇಶಕರು, ಸಿ.ಎಸ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಕಡತಕ್ಕೆ.

# ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆ

ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಬೇಧಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದಕ್ಕಾಗಿ ಕಾರ್ಯ ನಿರ್ವಹಿಸುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ, ವೈಯಕ್ತಿಕವಾಗಿಯಾಗಲೀ ಅಥವಾ ಸಾಮೂಹಿಕವಾಗಿಯಾಗಲೀ ನಮ್ಮಲ್ಲಿರುವ ಎಲ್ಲ ಬೇಧಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೆ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸುತ್ತೇನೆಂದು ಸಹ ಪ್ರತಿಜ್ಞೆ ಮಾಡುತ್ತೇನೆ.